ಸಂಘಗಳಿಗೆ ಇಂಟರೆಸ್ಟ್ ಸಬ್ಸಿಡಿ ಕೊಟ್ಟು ಡಿಸಿಸಿ ಬ್ಯಾಂಕಿನವರು ಹಣ ಕೊಟ್ಟರೆ ವ್ಯವಸಾಯ ಸೇವಾ ಸಹಕಾರ ಸಂಘಗಳು ಗೊಬ್ಬರವನ್ನು ತಂದು ವಿತರಣೆ ಮಾಡುತ್ತವೆ; ಆದರಿಂದ ರೈತರಿಗೆ ಅನುಕೂಲ ವಾಗುತ್ತದೆ. ಈ ಬಗ್ಗೆ ತಾವು ಭರವಸೆ ಕೊಡಬೇಕು.

ಶ್ರೀ ಹೆಚ್. ಆರ್. ರಾಮು.— ಆ ಬಗ್ಗೆ ತೀವ್ರವಾಗಿ ಪರಿಶೀಲಿಸುತ್ತೇನೆ.

ಶ್ರೀ ಸಿ. ಬೈರೇಗೌಡ.— ಸರ್ಕಾರದಿಂದ ಬರಬೇಕಾದುದನ್ನು ಸಹಕಾರ ಸಂಘಗಳಿಗೆ ಕೊಟ್ಟರೆ ಸಾಕು. ಅದನ್ನಾದರೂ ಮಾಡುತ್ತೇವೆಂದು ಹೇಳಿ.

(ಉತ್ತರವಿಲ್ಲ)

SRI D. B CHANDRE GOWDA.— Sir, I would like to make an appeal to you, first before I draw the attention of the Hon. Minister. Sir, the matter merits discussion and full scale debate as took place in the Upper House. I would request you to please convert it under Rule 68 so that we can discuss in detail, just now; otherwise....

MR. SPEAKER.— Three of you have drawn the attention of the Government. All the three are the senior Members of the Opposition. Does the Minister have anything to say ?

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಯನ್ನು ನಾನು ಗಮನಿಸಿದ್ದೇನೆ. ನಿನ್ನೆ ಸಂಜೆ ಇದು ನನ್ನ ಕೈಗೆ ಬಂತು. ಮೇಲ್ಮನೆಯಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಚರ್ಚೆ ನಡೆಯುತ್ತಿರುವುದರಿಂದ ಅಲ್ಲಿನ ಸಭೆಗೆ ಹೋಗುವುದಕ್ಕೆ ಮುಂಚಿತವಾಗಿ ಇಲ್ಲಿ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಿರುವುದರಿಂದ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡ ಬೇಕೆಂದು ನಾನು ಬಂದಿದ್ದೇನೆ. ಆವರು ಸರ್ಕಾರದ ಗಮನಸೆಳೆದರೆ ನಾನು ಉತ್ತರಿಸುತ್ತೇನೆ. ಆದಕ್ಕೆ ಬೇಕಾದರೆ ಸ್ಪಷ್ಟೀಕರಣ ನೀಡುವುದಕ್ಕೆ ತಯಾರಿದ್ದೇನೆ.

SRI D. B. CHANDRE GOWDA.— Sir, since he has already replied to this matter in the Upper House, I am making an appeal to convert this to rule 68 for a full scale discussion.

MR. SPEAKER.— Yesterday, we had meeting of the Business Advisory Committee. You know, how tight the schedule of the House is. I am afraid, it will not be possible to find time for this under rule 68. I would request you to just call the attention of the Hon. Minister.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೆ, ಆವರು ಗಮನ ಸೆಳೆಯಲಿ. ನಾನು ಉತ್ತರ ಹೇಳುತ್ತೇನೆ. ನಂತರ ಉದ್ಭವಿಸುವ ವಿಷಯ ತಮಗೆ ಮತ್ತು ಆವರಿಗೆ ಸೇರಿದ್ದುದು.

ಶ್ರೀ ಡಿ. ಬಿ. ಚಂದ್ರೇಗೌಡ.— ನನಗೆ ಕಾಪೀಸ್ ಬಂದಿಲ್ಲ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಕೊಟ್ಟಿದ್ದೇನೆ.

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಸರ್ವೆ ನಂಬರ್ ೮೩೯ ರಿಂದ ೮೪೧ರವರೆಗೆ ಭೂ ಸ್ವಾಧೀನ ಹಾಗೂ ನಿವೇಶನಗಳ ವಿತರಣೆ.

SRI D. B. CHANDRE GOWDA.— Sir, I would like to call the attention of the Hon. Minister for Fisheries, Ports, Housing and Urban Development regarding distribution of sites by acquiring land at Survey Nos. 839B, 839C, 841A and 841B by the Bellary Urban Development Authority, Bellary.

SRI T. N. NARASIMHA MURTHY (Minister for Fisheries, Ports, Housing and Urban Development):—Mr. Speaker, Sir, in responce to the calling attention notice given by the Hon. ble Leader of Opposition Sri D. B. Chandre Gowda, Sri P. G. R. Sindhya and Sri H. Ekanthaiah, my statement is as follows:—

The cause of action for the call attention notice given under Rule 72 by Sarvashri D. B. Chandregowda and others seems to have arisen out of the Notification No. HUD 285 MIB 84 dated 25-5-1990 issued by the Housing and Urban Development Department wherein the Government, in exercise of the powers conferred by Sub-Section (7) of Section 19 of the Karnataka Urban Development Authorities Act 1987 read with Section 21 of the general clauses Act, 1899, had decided to withdraw the land acquisition proceedings in respect of the lands in Sy. Nos. 839B, 839C, 841A and 841B of Bellary village, which had been previously acquired by the erstwhile City Improvement Board, Bellary for the formation of Raghavendra Nagar residential layout. This decision was taken on the basis of concurrent opinions furnished by the two consecutive Advocate Generals (viz. Sri C. Shivappa on 3rd November 1989 and Sri B. V. Acharya on 9th March 1990)to the effect that there was no legal bar under the Karnataka Urban Development Authorities Act to denotify the lands in question in case the Government was of the view that the offer made by Sri D. Pullaiah one of the Khatedars for making available 11 Acres of land in Sy. No 935 of Bellary Village (in lieu of 17-74 acres of land in Sy. Nos. 839 and 841 of the same village) free of cost, to Bellary Urban Development Authority and also forming the layout in the alternate land at his own cost was more beneficial to Government.

2. At one stage approval to notify the acquired lands had been granted by the then Urban Development Minister (Sri M. Chandrashekar) on 24-6-1988, but it could not be implemented without cancelling the allotment of sites already made. Later on, frequent stay orders and political influence prevented any allotment of sites by the then Ministers of Janata Party and important party leaders. The then Minister incharge of Bellary District, Sri M. P. Prakash apart from Sri Madhu Dandavate, M. P. (and now the Union Finance Minister) had also written letters to Government to denotify the lands. It was only with a view to finalising this long pending case that I had taken a decision, finally, to denotify the lands.

3. The Govrnment was of the view that there is no illegality or impropriety or any loss of revenue to the State exchequer in accepting Sri. Pullaiah's offer of alternate land. The decision to denotify the lands, subject to the fulfillment of the conditions mentioned in the notification dated 25 th May 1990 by Sri. Pullaiah was taken accordingly. However, in deference to the views expressed by the

Members of the Karnataka Legislative Council in the debate on this issue held on 2nd July 1990. and to counteract the baseless and Politically motivated allegations made against Government about under-hand dealings behind the said decision. I have already announced on the floor of the Legislative Council ths Government's decision to cancel the de-notification order. Which in any case could not have taken effect in the absence of fulfillment of all the prescribed conditions mentioned in the notification by Sri. Pullaiah and subsequent execution of a reconveyance deed by the Bellary Urban Development Authority (the present legal owners of the land) in Sri. Pullaiah's favour. The spot decision to cancel the denotication order already announced by me on the floor of the Council yesterday puts a nail on the allegations of under-hand dealings behind the earlier decision made by the Hon'ble Member of the House. This is in complete contrast to the manner in which the previous Government had been dealing with numerous land scandals which are now a part of the history.

ಬಿ.ಜೆ.ಪಿ. ಪಿ.ಎಂ.

SRI K. LAKKAPPA —Notification, denotification and acquisition of land throughout the State is going on as a routine matter. Does it attract the special attention under the rules of procedure to bring it in the form of a calling attention notice either in the Council or in the Assembly here ? Is it such a serious urgent public importance matter to be discussed in this House ? If so, about 150 societies are there and 150 acquisition proceedings are there. Notifications are there.

ಶ್ರೀ ಪಾಟೀಲ್ ನಾಗರಾಜ್.—ಗಮನ ಸೆಳೆವ ಸೂಚನೆ ಮೇಲೆ ಬೇರೆಯವರು ಮಾತನಾಡ ಬಾರದೆಂದು ಹೇಳುತ್ತೀರಿ.

ಅಧ್ಯಕ್ಷರು.—ಮಾತನಾಡಲೇಬಾರದು.

SRI K. LAKKAPPA,—This is a politically motivated issue bring brought.

(Interruptions)

SRI K. LAKKAPPA.—This is a systematic denigration going on.

MR. SPEAKER.—Of what ?

SRI K. LAKKAPPA.—Sir, character assassination of any individual or a group of people belonging to a particular Party.

MR. SPEARER —Whose character ?

SRI K. LAKKAPPA.—Sir, records are all there. It was done in your own Government, by your own Government, recommended by your own Government. If you are going to allow this kind of call attentions, hundreds of call attentions will come up.

SRI D. B. CHANDRE GOWDA. If the Member goes on like this, I cannot make up my mind.

(Interruptions)

SRI K. LAKKAPPA.—Sir, I leave it to your wisdom. Tomorrow there will be hundreds of calling attentions.

† SRI D. B. CHANDRE GOWDA —I take the last para.

> "This is in complete contract to the manner in which the previous Government had been dealing with numerous land scandals which are now a part of the history"

I don't know what made the Minister to make such observations. Otherwise I would have confined myself to Bellary. He has widened the scope of discussion. ಮುಖ್ಯಮಂತ್ರಿಗಳು ಘಮ್ಮನೆ ಪ್ರಪೋಸಲ್ ಕೊಟ್ಟಿದ್ದಾರೆ ಆನ್ನೋದೇ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ ತೀರ್ಪು ಆಗಬೇಕು, ಚರ್ಚೆ ಆಗಬೇಕು ಎಂದೂ ಹೇಳಿ ಜ್ಯುಡಿಶಿಯಲ್ ಎನ್‌ಕ್ವೈರಿ ಮಾಡುವ ಪ್ರಕರಣಗಳು ನಮ್ಮ ರಾಜ್ಯದಲ್ಲಿ ಇದ್ದಾವೆ. ಅದಕ್ಕಿಂತಲೂ ವಿಭಿನ್ನವಾದ ಈ ಒಂದು ವ್ಯವಸ್ಥೆಯನ್ನು ಪ್ರಶ್ನೆ ಮಾಡುತ್ತಿದ್ದೇವೆ. ಇದಕ್ಕೆ ಬಹಳ ಹಳೆ ಕಾಲದ ಹಿನ್ನೆಲೆ ಇದೆ. ೧೪-೨-೧೯೬೨ರಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಗುಂಡೂರಾಯರ ಕಾಲದಿಂದ ಪ್ರಾರಂಭವಾದ ಈ ಒಂದು ವಿಚಾರ ೮ ವರ್ಷಗಳ ಕಾಲ ೩ ಜನ ಅಲ್ಲಿಂದೀಚೆಗೆ ಮುಖ್ಯಮಂತ್ರಿಗಳನ್ನು ಕಂಡು, ರಾಜ್ಯಪಾಲರ ಆಡಳಿತವನ್ನು ದಾಟಿ; ಅದು ಏನೇ ಇರಲಿ ೮ ತಿಂಗಳಲ್ಲಿ ೮ ವರ್ಷದ ಸಮಸ್ಯೆಯನ್ನು ಬಿಡಿಸತಕ್ಕ ಸುಲಭವಾಗಿ ಬಿಡಿಸತಕ್ಕ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾನ್ಯ ಮಂತ್ರಿಗಳು ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸಬೇಕು. ಆದರೆ ಅವರನ್ನು ನಾನು ಕೇಳುವ ಪ್ರಶ್ನೆಗಳು ಈ ಒಂದು ಉತ್ತರದಿಂದ ಉದ್ಭವವಾಗಿರತಕ್ಕ ಮುಖ್ಯವಾದ ಪ್ರಶ್ನೆ ಎಂದರೆ.

> "This decision was taken on the basis of concurrent opinions furnished by the two consecutive Advocate Generals (viz. Sri C. Shivappa on 3-11-1989 and Sri B. V. Acharya on 9-3-1990) to the effect that there was no legal bar under the Karnataka Urban Development Authorities Act to denotify the lands in question."

ಒಂದು ಸಾರಿ ಕರ್ನಾಟಕ ಹೈಕೋರ್ಟ್‌ನಲ್ಲಿ ಇದನ್ನು ಚರ್ಚೆ ಮಾಡಿ ಇದಕ್ಕೆ ೧೪-೬-೧೯೮೪ರಲ್ಲಿ ಒಂದು ತಡೆಯಾಜ್ಞೆಯನ್ನು ಕೊಟ್ಟು, ಕೇವಲ ಒಂದೂವರೆ ತಿಂಗಳಲ್ಲಿ ತಡೆಯಾಜ್ಞೆಯನ್ನು ಹಿಂದೆ ತೆಗೆದುಕೊಂಡಾವಪನ್ನು ವಜಾ ಮಾಡಿದ್ದಾರೆ. ಮೂರು ಸಾರಿ ಈ ಇಲಾಖೆಯ ಸಂಬಂಧಪಟ್ಟ ಮಂತ್ರಿಗಳು ತಡೆಯಾಜ್ಞೆ ನೀಡಿ ಮೂರು ಬಾರಿಯೂ ಕಾನೂನು ತಜ್ಞರ ಸಲಹೆಯನ್ನು ಪಡೆದು ನಿಲುಗಡೆಯನ್ನು ವಜಾ ಮಾಡಿ ಡಿಕ್ಟೇಷನ್ ಪ್ರೊಸೀಡಿಂಗ್ಸ್‌ಗೆ ಆರ್ಡರ್ ಮಾಡಿದ್ದಾರೆ. ಏಕಾಏಕಿ ೨೫-೫-೧೯೯೦ರಲ್ಲಿ ಸಂಬಂಧಪಟ್ಟ ಮಂತ್ರಿಗಳು ಡೀ-ನೋಟಿಫೈ ಮಾಡಿ ಆದೇಶ ನೀಡುವಾಗ ಯಾರನ್ನೂ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ? ೩-೧೧-೧೯೮೯ಕ್ಕೆ ಶ್ರೀಮಾನ್ ಶಿವಪ್ಪನವರು ಮತ್ತು ೯-೩-೧೯೯೦ಕ್ಕೆ ಆಚಾರ್ಯ ಅವರು ಏನು ತಮ್ಮ ಅಭಿಪ್ರಾಯವನ್ನು ಈ ವಿಚಾರದಲ್ಲಿ ವ್ಯಕ್ತ ಮಾಡಿದ್ದಾರೆ ಅದಕ್ಕಿಂತಲೂ ಹಿಂದೆ ಮೂರು ಸಾರಿ ಮುಖ್ಯಮಂತ್ರಿಗಳು ತಡೆಯಾಜ್ಞೆಯನ್ನು ಕೊಟ್ಟಾಗ ಅಲ್ಲಿಯೂ ಕೂಡಾ ಈ ಒಂದು ಅಡ್ವೊಕೇಟ್ ಜನರಲ್ ಒಪೀನಿಯನ್ ತೆಗೆದುಕೊಂಡು ಶಾಸನ ಮತ್ತು ನಿಯಮಾವಳಿಗಳನ್ವಯ ಈ ತಡೆಯಾಜ್ಞೆಯನ್ನು ವಜಾ ಮಾಡುತ್ತೇವೆಂದು ಹೇಳಿದ್ದಾರೆ. ಅಂದರೆ ಸರ್ಕಾರದ ಮುಖ ನೋಡಿ ಅಡ್ವೊಕೇಟ್ ಜನರಲ್‌ರವರು ಅಭಿಪ್ರಾಯ ಕೊಡುತ್ತಾರೆಯೇ ಅಥವಾ ಶಾಸನವನ್ನು ಓದಿ ಈ ಒಂದು ಸಂಬಂಧಪಟ್ಟಂಥ ವ್ಯವಹಾರವನ್ನು ಅರ್ಥ ಮಾಡಿಕೊಂಡು ಸರ್ಕಾರಕ್ಕೆ ಮಾರ್ಗದರ್ಶನ ಮಾಡುತ್ತಾರೆಯೇ ಇದರ ಮೇಲೆ ನನಗೆ ಮೊದಲ ಕ್ಲಾರಿಫಿಕೇಷನ್ ಬೇಕು.

MR. SPEAKER.—Does it apply to every Advocate General who comes into the picture?

SRI D. B. CHANDRE GOWDA.—That is exactly what was said by him.

MR. SPEAKER.—It is a very innocent statement to say the Advocate General was appointed in a particular manner. So it is

obvious that whenever any Advocate General gives his opinion, he applies his judicial, legal mind and then gives his opinion.

SRI D. B. CHANDRE GOWDA.—I am raising only because "This is in complete contrast to the manner in which the previous Government had been dealing with the numerous land scandals which are now a part of history."

Mr. SPEAKER.—The Advocate General is not a part of the Government.

SRI D. B. CHANDRE GOWDA.—He advises the Government on various issues:

Mr. SPEAKER.—He gives his opinion to the Government.

SRI D. B. CHANDRE GOWDA.—What was the opinion of the Advocate General earlier than these two opinions? Whether he would consider to place all those opinion on the table of the House. ರಾಜಕಾರಣಿಗಳ ಹಸ್ತಕ್ಷೇಪ ಇತ್ತು; ಅದಕ್ಕಾಗಿ ತಡೆದಿದ್ದೇವೆಂದು ಹೇಳಿದ್ದಾರೆ. ಆದರ ವಿವರಣೆಗೆ ನಾನು ಹೋಗುವುದಿಲ್ಲ. ಅವರಲ್ಲಿರತಕ್ಕ ದಾಖಲೆಗಳನ್ನು ಒದಗಿಸಲಿ. ಲ್ಯಾಂಡ್ ಅಕ್ವಿಜಿಶನ್ ಅವಾರ್ಡ್ ಪಾಸ್ ಆಗಿದೆ. ೫ ಲಕ್ಷದ ೩೧ ಸಾವಿರ ರೂಪಾಯಿ ಪರಿಹಾರಧನವನ್ನು ಭೂಮಾಲೀಕರಿಗೆ ಕೊಡಬೇಕೆಂದು ನಿಗದಿಪಾಡಿದ್ದಾರೆ. ಆ ಹಣವನ್ನು ಕೋರ್ಟ್‌ನಲ್ಲಿ ಡಿಪಾಸಿಟ್ ಮಾಡಿದ್ದಾರೆ. ಭೂಸ್ವಾಧೀನವನ್ನು ಸರ್ಕಾರ ಕೈಗೆ ತೆಗೆದುಕೊಂಡಮೇಲೆ ಈ ಭೂಮಿ ಸರ್ಕಾರದ ಭೂಮಿಯಾಗುತ್ತದೆ. Government becomes the owner of the land. ಇಂತಹ ಸ್ಥಿತಿಯೊಳಗೆ ಸುಪ್ರೀಂ ಕೋರ್ಟ್ ತೀರ್ಮಾನ ಏನು ಹೇಳುತ್ತದೆ ಎಂದರೆ, ಅಂತಹ ಭೂಮಿಯನ್ನು ಯಾವ ಸರ್ಕಾರವೂ ತೊಂದರೆ ಮಾಡಬಾರದು ವಿನಾಕಾರಣ ವಾಪಸ್ಸು ಮಾಡಬಾರದೆಂದು ಸರ್ವೋಚ್ಚ ನ್ಯಾಯಾಲಯ ತೀರ್ಮಾನ ಮಾಡಿದೆ. ಇಂತಹ ಅಭಿಪ್ರಾಯವನ್ನು ಪ್ರಕ್ಟ ಪಾಡುವಾಗ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಹೇಳಬೇಕಾಗಿತ್ತು. ನನಗೆ ಗೊತ್ತಿಲ್ಲವೆಂದು ಹೇಳಿದರೆ ಆಗುವುದಿಲ್ಲ, ಈ ತೀರ್ಮಾನ ಸರ್ಕಾರದ ಗಮನಕ್ಕೆ ಬಂದಿದೆಯೆ? ಮೂರನೆಯದಾಗಿ "The Government was of the view that there is no illegality or impropriety."

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಲ್ಯಾಂಡ್ ಅಕ್ವಿಜಿಶನ್ ಆಕ್ಟ್‌ನಲ್ಲಿ ಒಂದು ಸೆಕ್ಷನ್ ಇದ್ದಹಾಗೆ ಕಾಣುತ್ತದೆ. ಪ್ರೊಸಿಡಿಂಗ್ಸ್ ಆದಮೇಲೆ ಡ್ರಾಪ್ ಮಾಡುವುದಕ್ಕೆ ಬರುತ್ತದೆ. If my memory goes well, ಆ ವಿಷಯದಲ್ಲಿ ನಾನು ಹೇಳಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಮಾತು ಹೇಳಿದರು, ಸರ್ವೋಚ್ಚ ನ್ಯಾಯಾಲಯ ಒಂದು ಹೇಳಿಕೆಯನ್ನು ಕೊಟ್ಟಿದೆ, ಅದು ಅಂತಿಮ ಆಗುತ್ತದೆ, ಅದನ್ನು ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. I remember to have read there is a section in the Land Acqussition Act to drop the whole matter, ಬೇರೆ ಒಂದು ಸೆಕ್ಷನ್ ಇದೆ, subject to verification; I may be wrong or so.

ಶ್ರೀ ಡಿ. ಬಿ. ಚಂದ್ರೇಗೌಡ.—ನನ್ನ ಪ್ರಶ್ನೆ ನಿಮಗೆ ಅರ್ಥವಾಯಿತೋ ಏನೋ ಗೊತ್ತಿಲ್ಲ.

ಶ್ರೀ ಎಂ. ಶಂಕರರೆಡ್ಡಿ.—ಮಾನ್ಯ ಅಧ್ಯಕ್ಷರೆ, ಸಿದ್ಧಾರವರ ಪ್ರಶ್ನೆ.....

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಅದನ್ನು ಅವರನ್ನೇ ಕೇಳಿ. ಲ್ಯಾಂಡ್ ಅಕ್ವಿಜಿಶನ್ ಆಫೀಸರ್ ಅವಾರ್ಡ್ ಪಾಸ್ ಮಾಡಿದ ಮೇಲೆ ಅದರಲ್ಲಿ ೫ ಲಕ್ಷದ ೩೧ ಸಾವಿರ ರೂಪಾಯಿ ಪರಿಹಾರಧನವನ್ನು ನಿಗದಿ ಮಾಡಿ ಆ ಹಣವನ್ನು ಕೋರ್ಟ್‌ನಲ್ಲಿ ಡಿಪಾಸಿಟ್ ಮಾಡಿದ ಮೇಲೆ ಸರ್ಕಾರ ಭೂಮಿಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತದೆ. ಅಂದರೆ ಭೂಸ್ವಾಧೀನದ ಕಾರ್ಯ ಇಲ್ಲಿ ಮುಗಿದಿದೆ. ಈಗ ನ್ಯಾಯಾಲಯದಿಂದ ತೀರ್ಪು ಏನು ಹೇಳುತ್ತದೆಂದರೆ ಸರ್ಕಾರ ಭೂಸ್ವಾಧೀನ ಮಾಡಿಕೊಂಡ ಮೇಲೆ ಅದು ಸರ್ಕಾರ ಜಾಗ ಆಗುತ್ತದೆಂದು.

ಶ್ರೀ ಎಂ. ರಾಮಂಪ್ಪ.—ಸಿರಗುಪ್ಪದಲ್ಲಿ ಮಾನ್ಯ ಸಿಂಧ್ಯಾರವರು ಏನು ಮಾಡಿದ್ದಾರೆ ?

ಶ್ರೀ ಡಿ. ಬಿ. ಚಂದ್ರೇಗೌಡ.—ಅದನ್ನು ಸಹ ಚರ್ಚೆಗೆ ತೆಗೆದುಕೊಂಡು ಬನ್ನಿ. ಆ ಮೇಲೆ ಸಿಂಧ್ಯಾ ಅವರನ್ನು ತೆಗೆದುಕೊಂಡು ಬನ್ನಿ...

(ಗೊಂದಲ)

ಶ್ರೀ ಎಂ. ರಾಮಂಪ್ಪ.—ಇದು ಸರಿಯಲ್ಲ...

ಶ್ರೀ ಡಿ. ಬಿ, ಚಂದ್ರೇಗೌಡ.—ನಾನು ರಾಮಪ್ಪನವರು ಎಂದು ಹೇಳಲಿಲ್ಲ. ನಾನು ಬಡವರಿಗೆ ಅಂತ...

ಶ್ರೀ ಎಂ. ರಾಮಪ್ಪ.—ರಾಮಪ್ಪ ಯಾವತ್ತೂ ಕೇಳಿಲ್ಲ ಮತ್ತು ತೆಗೆದುಕೊಂಡಿಲ್ಲ....

ಶ್ರೀ ಡಿ. ಬಿ. ಚಂದ್ರೇಗೌಡ.—ಮತ್ತೆ ನೀವು ಏಕೆ ಕೋಪ ಮಾಡಿಕೊಳ್ಳುತ್ತೀರಿ ? ಕುಂಬಳಕಾಯಿ ಕಳ್ಳ ಎಂದರೆ ಹೆಗಲುಮುಟ್ಟಿ ನೋಡಿಕೊಳ್ಳುವುದು ಏಕೆ ?

ಶ್ರೀ ಪಿ. ಜಿ. ಆರ್, ಸಿಂಧ್ಯ.—ನನ್ನ ಹೆಸರು ಇಲ್ಲಿ ತೆಗೆದುಕೊಂಡಿರುವಾಗ ನಾನು ಆಮೇಲೆ ಮಾತನಾಡುತ್ತೇನೆ. ನಾನು ಏನು ಕೇಳುತ್ತೇನೆ ಎಂದರೆ. ಈಗ ನನ್ನ ಹೆಸರನ್ನು ಶ್ರೀ ರಾಮಪ್ಪನವರು ಮತ್ತು ಶ್ರೀ ಶಂಕರರೆಡ್ಡಿಯವರು ತೆಗೆದುಕೊಂಡು ನಾನು ೧೯೮೫ನೇ ಇಸವಿಯಲ್ಲಿ ೩ ತಿಂಗಳು ಇಲ್ಲವೇ ನಾಲ್ಕು ತಿಂಗಳ ಕಾಲ ಹೌಸಿಂಗ್...

ಅಧ್ಯಕ್ಷರು.—ಶ್ರೀ ಶಂಕರರೆಡ್ಡಿ ಸಾಹೆಬರೇ, ನೀವು ಏನು ಹೇಳಿದ್ದೀರಿ, ಅದನ್ನು ಬರೆದು ಕಳಿಸಿ

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅವರು ಹೇಳಿದ್ದುದು ರೆಕಾರ್ಡಿನಲ್ಲಿ ಹೋಗಿದೆ. ನಾಳೆ ಅದು ಪತ್ರಿಕೆಯಲ್ಲೂ ಬರುತ್ತದೆ,

ಅಧ್ಯಕ್ಷರು.—ಅವರು ಹೇಳಿದ್ದುದು ನನಗೇ ಕೇಳಿಸಿಲ್ಲ, ಅಂದ ಮೇಲೆ ರೆಕಾರ್ಡಿನಲ್ಲಿ ಹೇಗೆ ಹೋಗುತ್ತದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ನನಗೆ ಕೇಳಿಸಿದೆ. ತಾವು ಅದನ್ನು ತೆಗೆದು ಹಾಕುವುದಾದರೆ ನಾನು ಏನೂ ಹೇಳುವುದಿಲ್ಲ. ಇಲ್ಲದಿದ್ದರೆ ನಾನು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಇದು ಸೀಮಿತವಾದಂಥ ಪ್ರಶ್ನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅದು ಸೀಮಿತವಾಗಿರುವುದು. ಏಕೆಂದರೆ ನಾನು ಹೇಳುತ್ತೇನೆ ಕೇಳಿ. Because he has made allegations against us

(ಗೊಂದಲ)

MR. SPEAKER.—In view of the desire of Sri Ramappa, Sri Shankar Keddy, Sri Allam Veerabhadrappa, they too seem to be very anxious about this. I would like to take up-on your suggestion and will allow a discussion on this separately.

SRI P. G. R. SINDYA....I will make an appeal to you Sir. ಅವರು ಏನು ಪ್ರಸ್ತಾಪ ಮಾಡಿದ್ದಾರೆ. ಆ ವಿಷಯವನ್ನು ಕೂಡ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಎರಡನ್ನೂ ಜೊತೆಯಲ್ಲೇ ತೆಗೆದುಕೊಳ್ಳೋಣ

MR. SPEAKER.—You please send it to me in writing

ಶ್ರೀ ಡಿ. ಬಿ. ಚಂದ್ರೇಗೌಡ.—ಅವರು ಉತ್ತರ ಹೇಳುವಾಗ "to counteract base less. politically motivated allegations made gainst the Government ಎಂದು ಹೇಳಿದ್ದಾರೆ, ನಾವು ಅಲಿಗೇಶನ್ ಎಲ್ಲಿ ಮಾಡಿದ್ದೇವೆ ? Now. therefore I have to make allegation.

ಅಧ್ಯಕ್ಷರು.—ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಆ ಸ್ಟೇಟ್‌ಮೆಂಟನ್ನು ಮೊದಲಿ ಓದಿರಲಿಲ್ಲ. ತಾವು ಏನು ಓದಿನೇ ಅನುಬಂಧದ ಮೇಲೆ ಚರ್ಚೆಗೆ ಅರಿಕೆ ಮಾಡಿದ್ದೀರಿ, ಆವಾಗ ನಾನು ಸ್ಟೇಟ್‌ಮೆಂಟನ್ನು ಓದಿರಲಿಲ್ಲ. ಅದನ್ನು ಓದಿದ ಮೇಲೆ ಮತ್ತು ಬಳ್ಳಾರಿ ಜಿಲ್ಲೆಯ ಮಾನ್ಯ ಸದಸ್ಯರು ಬೇರೆ ಎದ್ದು ಮಧ್ಯಪ್ರವೇಶ ಮಾಡುತ್ತಿರುವುದರಿಂದ ಇದನ್ನು ಬೇರೆ ಚರ್ಚೆಗೆ ಕಾಲ ನಿಗದಿ ಮಾಡುತ್ತೇನೆ

SRI D. B. CHANDREGOWDA. . I would appeal to you to fix the date. Day after tomorrow may be fixed.

ಅಧ್ಯಕ್ಷರು.—ಮಾನ್ಯ ನರಸಿಂಹಮೂರ್ತಿಯವರೇ ಇದನ್ನು ಯಾವಾಗ ಚರ್ಚೆಗೆ ತೆಗೆದುಕೊಳ್ಳೋಣ

SRI T. N. NARASHIMA MURTHY....Will leave it to the Hon.Speaker

MR. SPEAKER...I will fix the time in consulation with the Leader of the Opposition and the House.

ಶ್ರೀ ವಾಟಾಳ್ ನಾಗರಾಜ್.—ನಾನು ತಮಗೆ ಒಂದು ಪತ್ರ ಬರೆದಿದ್ದೆ. ನಿನ್ನೆಯ ದಿವಸ ಈ ಸದನದಲ್ಲಿ ಕುಲದೀಪಸಿಂಗ್ ಆಯೋಗದ ಬಗ್ಗೆ ವರದಿ ಸರ್ಕಾರಕ್ಕೆ ಬಂದಿದೆಯೇ ಇಲ್ಲವೇ ಎನ್ನುವ ಪ್ರಶ್ನೆ ಬಂದಿತ್ತು. ಮಾನ್ಯ ಮುಖ್ಯಮಂತ್ರಿಗಳು ವರದಿ ಇನ್ನೂ ಬಂದಿಲ್ಲ ಎಂದು ಹೇಳಿದ್ದಾರೆ. ಆದರೆ ಶ್ರೀ ಹೆಗಡೆಯವರು ರಾಜೀನಾಮೆ ಕೊಟ್ಟಿದ್ದು, ಬಿಟ್ಟಿದ್ದು ಎಲ್ಲಾ ಗೊಂದಲದಲ್ಲಿದೆ ಈ ವಿಚಾರ ಜನಜನಿತವಾಗಿ ರಾಜ್ಯದಲ್ಲಿ ಚರ್ಚೆಯಾಗುತ್ತಿದೆ...

ಅಧ್ಯಕ್ಷರು —ಹೌದು, ದೇಶದಲ್ಲಿ ಚರ್ಚೆಯಾಗುತ್ತಿದೆ, ಜನಜನಿತವಾಗಿದೆ. ಆದರೆ ಈ ರಾಜೀನಾಮೆಯನ್ನು ಅವರು ನಿಮಗೆ ಕಳಿಸಿಕೊಟ್ಟಿದ್ದಾರೆಯೆ ? ರಾಜೀನಾಮೆಯನ್ನು ನನಗೆ ಕಳಿಸಿ ಕೊಟ್ಟಿಲ್ಲ. ನಿಮಗೂ ಕಳಿಸಿಕೊಟ್ಟಿಲ್ಲ, ಆದ್ದರಿಂದ ಈ ಪ್ರಮೇಯ ಎಲ್ಲಿ ಬರುತ್ತದೆ ?

ಶ್ರೀ ವಾಟಾಳ್ ನಾಗರಾಜ್ —ಯೋಜನಾ ಆಯೋಗದ ಉಪಾಧ್ಯಕ್ಷರು ತಮ್ಮ ರಾಜೀನಾಮೆಯನ್ನು ತಮಗೂ ಕಳಿಸಬೇಕಾಗಿಲ್ಲ...

ಅಧ್ಯಕ್ಷರು.—ಅಯೋಗವನ್ನು ನಾವು ನೀವು ಮಾಡಿದ್ದೇನು ? ಕೇಂದ್ರ ಸರ್ಕಾರದವರು ಮಾಡಿರುವುದು.

ಶ್ರೀ ವಾಟಾಳ್ ನಾಗರಾಜ್.—ಇದು ವೈಯಕ್ತಿಕ ವಿಚಾರ ಅಲ್ಲ, ಸಾರ್ವಜನಿಕವಾದ ಪ್ರಶ್ನೆ ಇದು. ಸಾರ್ವಜನಿಕವಾಗಿ ಗಮನ ಸೆಳೆದಿರತಕ್ಕಂಥ ಪ್ರಶ್ನೆ. ನಿನ್ನೆ ದಿವಸ ಅವರು ರಾಜೀನಾಮೆ ಕೊಟ್ಟಿದ್ದರೆ, ಇವತ್ತು ಇಲ್ಲ ಎಂದು ಆಯಿತು...

ಏಕೆಂದರೆ, ಆ ವರದಿಯಲ್ಲಿ ಏನಂ ಬಂದಿದೆ ಎಂಬುದು ಮುಖ್ಯ. ಅವರು ರಾಜೀನಾಮೆ ಕೊಟ್ಟಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ, ಸಂತೋಷ, ಅವರು ಸಂಪ್ರದಾಯದ ಪ್ರಕಾರ ಮಾಡಿದು ಕೊಂಡಿದ್ದಾರೆ. ನಾನು ಅವರ ಬಗ್ಗೆ ವೈಯಕ್ತಿಕವಾಗಿ ಮಾತನಾಡಬೇಕೆಂಬ ಉದ್ದೇಶ ಇಲ್ಲ. ಅವರನ್ನು ರಾಜೀನಾಮೆ ಕೊಡಬೇಕೆಂದು ಒತ್ತಾಯಂ ಮಾಡುವುದೂ ಇಲ್ಲ. ಏಕೆಂದರೆ, ನಮ್ಮ ರಾಜ್ಯದವರೊಬ್ಬರು ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದಾರೆ. ಅವರು ನಿನ್ನೆ ಪತ್ರಿಕೆಯಲ್ಲಿ ರಾಜೀನಾಮೆ ಕೊಟ್ಟಿದ್ದಾರೆಂದು ಬಂದಿದೆ, ಮತ್ತೆ ಇಂದು ಅವರ ರಾಜೀನಾಮೆಯನ್ನು ಒಪ್ಪಿಲ್ಲವೆಂದು ಬಂದಿದೆ. ಕುಲದೀಪ್ ಸಿಂಗ್ ಆಯೋಗದ ವರದಿ ಸರ್ಕಾರಕ್ಕೆ ಬಂದಿದೆ, ಅದು ಏನು ಎಂಬುದು ನಮಗೆ ಗೊತ್ತಾಗಬೇಕು....

SRI D B. CHANDRE GOWDA.—The Central Government is seized of the matter. Central Cabinet...

MR. SPEAKER.—Would you kindly advise your colleague ?

SRI D. B. CHANDRE GOWDA.—I appeal to you.

MR. SPEAKER.—He is very close to you.

(ಗೊಂದಲ)

MR. SPEAKER.—I call everyone to order.

SRI D. B. CHANDRE GOWDA.—Let it not go to the record.

MR. SPEAKER.—It shall not go to the record. Nothing is going to the record. ಮಾನ್ಯ ಸದಸ್ಯರು, ನಮ್ಮ ಸದನದ ಹಕ್ಕುಬಾಧ್ಯತೆಗಳು ಏನು ಮತ್ತು ಸದನಕ್ಕೆ ಏನು ಪವರ್ಸ್ ಇದೆ. ರಾಜ್ಯಾಂಗ ಕೇಂದ್ರ, ರಾಜ್ಯ ಹೇಗೆ ಎಂದು ನಮ್ಮ ಹದ್ದುಬಸ್ತನ್ನು ರಾಜ್ಯಾಂಗದಲ್ಲಿ ಗುರುತು ಮಾಡಿಕೊಟ್ಟಿದ್ದಾರೆ. ಆದ್ದರಿಂದ ಈ ಸದನದ ಸದಸ್ಯರಾದ ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಟ್ಟಿದ್ದಾರೆಂದು ನಿನ್ನೆ ಪತ್ರಿಕೆಯಲ್ಲಿ ಬಂತು ಇವತ್ತು ರಾಜೀನಾಮೆಯನ್ನು ಪ್ರಧಾನ ಮಂತ್ರಿಯವರು ಒಪ್ಪಿಲ್ಲವೆಂದು ಬಂದಿದೆ. ಈ ಎರಡೂ ವಿಚಾರಗಳೂ ಕೇಂದ್ರಸರ್ಕಾರಕ್ಕೆ ಸ್ಪಂದಿಸತಕ್ಕ

ವಿಚಾರಗಳು ಈ ಸದನಕ್ಕೂ ಅವರು ಕೊಟ್ಟಿರತಕ್ಕ ರಾಜೀನಾಮೆಗೂ ಯಾವ ರೀತಿಯ ಸಂಬಂಧವನ್ನು ಕಲ್ಪಿಸುವುದಕ್ಕೆ ಸಾಧ್ಯವಿಲ್ಲ. ಆದರೆ ನಿನ್ನೆ ಮುಖ್ಯಮಂತ್ರಿಗಳು ಹೇಳಿದರು. ಶ್ರೀಮಾನ್ ಬೈರೇಗೌಡರು ಈ ವಿಚಾರವನ್ನು ಪ್ರಸ್ತಾಪ ಮಾಡಿದರು ಎಂದು ಕಾಣುತ್ತದೆ. ಮಾನ್ಯ ಪಾಟಾಳ ನಾಗರಾಜ್ ಅವರೂ ಅದಕ್ಕೆ ಧ್ವನಿಗೂಡಿಸಿದರು. ಆಗ ಅವರು ಏನು ಹೇಳಿದರೆಂದರೆ, ನಾವು ಕೇಂದ್ರಕ್ಕೆ ನಾವು ಕಾಗದ ಬರೆಯುವುದಕ್ಕೆ, ನಾನು ಈಗಾಗಲೇ ಮುಖ್ಯ ಕಾರ್ಯದರ್ಶಿಯವರಿಗೆ ಹೇಳಿದ್ದೇನೆ ಎಂದು ಹೇಳಿದರು. ಇವತ್ತು ಮುಖ್ಯಮಂತ್ರಿಗಳು ನನಗೂ ಕಾಗದ ಬರೆದಿದ್ದಾರೆ, ಕಾಗದದಲ್ಲಿ ಅವರಿಗೆ ದೇಹಸ್ಥಿತಿ ಸರಿ ಇಲ್ಲ, ಎರಡು ದಿವಸಗಳ ಕಾಲ ಸದನಕ್ಕೆ ಬರುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ ಸಭೆಯ ಪರವಾಗಿ ಅವರ ಆರೋಗ್ಯ ಸುಧಾರಿಸಲಿ ಎಂದು ನಾನು ಆಶಿಸುತ್ತೇನೆ. ಈ ಕುಲದೀಪ್ ನಿಂಗ್ ಆಯೋಗದ ವರದಿ ಈಗ ಕೇಂದ್ರಸರ್ಕಾರದ ಆಸ್ತಿಯಾಗಿದೆ ಆ ವರದಿ ಬಹಿರಂಗವಾದ ಮೇಲೆ, it becomes an issue for public debate. Let us wait till then.

334ರ ನಿಯಮದ ಮೇರೆಗೆ

ಶಿವಮೊಗ್ಗ ರಾಷ್ಟ್ರೀಯ ಕಾನೂನು ಕಾಲೇಜಿಗೆ ನೇರ ವೇತನ ಪದ್ಧತಿಯನ್ನು ಒಳಪಡಿಸದೆ ಇರುವ ವಿಚಾರ

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ೧೯೭೪–೭೫ರ ಈಚೆಗೆ ಪ್ರಾರಂಭವಾದ ಹಾಸನದ ಎಂ. ಕೃಷ್ಣಾ ಲಾ ಕಾಲೇಜ್, ಸಿರ್ಸಿಯ ಎಂ.ಇ.ಎಸ್. ಲಾ ಕಾಲೇಜು ಮತ್ತು ಗುಲ್ಬರ್ಗಾದ ಸಿದ್ದಾರ್ಥ ಲಾ ಕಾಲೇಜುಗಳಿಗೆ ಸರ್ಕಾರವು ನೇರ ವೇತನ ಪದ್ಧತಿಗೆ ಒಳಪಡಿಸಿರುವಾಗ, ೧೯೬೯ರಲ್ಲಿ ಪ್ರಾರಂಭಿಸಿದ ಶಿವಮೊಗ್ಗ ರಾಷ್ಟ್ರೀಯ ಕಾನೂನು ಕಾಲೇಜಿಗೆ ನೇರ ವೇತನ ಪದ್ಧತಿ ಒಳಪಡಿಸದೇ ಇರುವುದರಿಂದ ಈ ಕಾಲೇಜಿಗೆ ತೊಂದರೆ ಆಗದೆ ಸರ್ಕಾರ ಈ ಬಗ್ಗೆ ಗಮನ ಹರಿಸಿ, ತಕ್ಷಣ ಸೂಕ್ತ ಕ್ರಮ ತಗೆದುಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—ಸ್ವಾಮಿ, ತಪ್ಪು ಅಪ್ಪಣೆ ಪಡೆದು ಈ ಒಂದು ಹೇಳಿಕೆಯನ್ನು ಸಭೆಯ ಮುಂದಿಡಲು ಆಶಿಸುತ್ತೇನೆ,

ಕರ್ನಾಟಕ ರಾಜ್ಯದಲ್ಲಿ ೪೨ ಕಾನೂನು ಕಾಲೇಜುಗಳು ಇವೆ. ದಿನಾಂಕ ೧–೨–೧೯೭೫ರಿಂದ ರಾಜ್ಯದಲ್ಲಿನ ಕಾನೂನು ಕಾಲೇಜುಗಳನ್ನು ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ತರಲಾಯಿತು. ಆದರಂತೆ ಕಾನೂನು ಕಾಲೇಜುಗಳು ಸರ್ಕಾರದಿಂದ ಅನುದಾನವನ್ನು ಕೋರಿ ವಿನಂತಿ ಮಾಡಿಕೊಂಡಾಗ ಈ ಕಾಲೇಜುಗಳು ಲೆಕ್ಕತಪಾಸಣೆ ಇತ್ಯಾದಿಗಳನ್ನು ಪೂರೈಸಿ ಅನುದಾನ ಮಂಜೂರಾತಿಗೆ ಅವಕಾಶ ಮಾಡಲಾಗುವುದು. ರಾಜ್ಯದಲ್ಲಿ ೪೨ ಕಾನೂನು ಕಾಲೇಜುಗಳ ಪೈಕಿ ೧೩ ಕಾಲೇಜುಗಳಿಗೆ ಅನುದಾನ ಮಂಜೂರಾತಿ ಬಗ್ಗೆ ಪ್ರಸ್ತಾವನೆಗಳು ಬಂದಿವೆ ಅವುಗಳಲ್ಲಿ ೫ ಕಾನೂನು ಕಾಲೇಜುಗಳಿಗೆ ಸರ್ಕಾರ ವೇತನಾನುದಾನ ಬಿಡುಗಡೆ ಮಾಡಿರುತ್ತದೆ. ಅನುದಾನ ಪಡೆಯುತ್ತಿರುವ ೫ ಕಾನೂನು ಕಾಲೇಜುಗಳ ವಿವರ ಈ ಕೆಳಕಂಡಂತೆ ಇದೆ.

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಪ್ರಾರಂಭಿಕ ವರ್ಷ	ಅನುದಾನ ಪಡೆದ ದಿನಾಂಕ
೧	ಆರ್. ಎಲ್. ಕಾನೂನು ಕಾಲೇಜು, ಬೆಳಗಾಂ	೧೯೫೯–೬೦	೧–೪–೮೬
೨	ಶಾರದಾ ವಿಲಾಸ ಕಾನೂನು ಕಾಲೇಜು, ಮೈಸೂರು	೧೯೫೪–೫೫	೧–೧–೮೮
೩	ಎಂ. ಇ. ಎಸ್. ಕಾನೂನು ಕಾಲೇಜು, ಸಿರಸಿ.	೧೯೭೪–೭೫	೧–೭–೮೬
೪	ಕೃಷ್ಣ ಕಾನೂನು ಕಾಲೇಜು. ಹಾಸನ.	೧೯೭೪–೭೫	೧–೧–೮೮
೫	ಸಿದ್ದಾರ್ಥ ಕಾನೂನು ಕಾಲೇಜು. ಗುಲ್ಬರ್ಗ.	೧೯೮೨–೮೩	೧–೧–೮೮

ಉಳಿದ ೮ ಕಾಲೇಜುಗಳ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ. ಅವುಗಳ ಪೈಕಿ ರಾಷ್ಟ್ರೀಯ ಕಾನೂನು ಕಾಲೇಜು, ಶಿವಮೊಗ್ಗ, ಒಂದಾಗಿರುತ್ತದೆ.